ರಾಯಿಸಬೇಕು ಎಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆರೆ ಕಟ್ಟುವುದು ಬಿಡುವುದು, ಜನರು ಬೇಡ, ಬೇಕು ಎಂದು ಹೇಳುವುದರ ಆಧಾರದ ಮೇಲೆ ಹೋಗುವುದಿಲ್ಲ. ಆ ಕೆರೆ ಕಟ್ಟುವುದರಿಂದ ದೇಶಕ್ಕೆ ಒಳ್ಳೆಯದೆ, ಕೆಟ್ಟದ್ದೆ ಎನ್ನುವುದನ್ನು ಯೋಜನೆಮಾಡಿ ನಿರ್ಧಾರ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಸರ್ಕಾರದವರು ಕೆರೆ ಕಟ್ಟೆಗಳನ್ನು ರೈತರ ಉಪಯೋಗಕ್ಕೆ ಮಾಡುತ್ತಾರೆಯೇ ಅಥವಾ ಮಂತ್ರಿಗಳ ಉಪಯೋಗಕ್ಕಾಗಿ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂತ್ರಿಗಳ ಉಪಯೋಗಕ್ಕೋಸ್ಕರವಾಗಿ ಕೆರೆ ಕಟ್ಟೆಗಳನ್ನು ಕಟ್ಟುವುದಿಲ್ಲ. ರೈತರ ಉಪಯೋಗಕೋಸ್ಕರವೇ ಕಟ್ಟುವುದು. ಆದರೆ ಒಂದು ಗುಂಪಿನ ರೈತರು ಬೇಕು ಎಂದು ಹೇಳುತ್ತಾರೆ, ಇನ್ನೊಂದು ಗುಂಪಿನ ಜನರು ಬೇಡ ಎಂದು ಹೇಳುತ್ತಾರೆ. ಆದುದರಿಂದ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ತಕ್ಕಡಿಯಲ್ಲಿ ತೂಕವಾಡಿ ತೀರ್ಮಾನ ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ರೈತರು ತಮ್ಮ ಕಷ್ಟ ಸುಖಗಳನ್ನು ಹೇಳಿದ್ದಾರೆ. ಆದುದರಿಂದ ಅದನ್ನು ಪುನಃ ಪರಿಶೀಲನೆಮಾಡಿ, ರೈತರಿಗೆ ಅನನುಕೂಲವಾಗುವ ಸ್ಥಿತಿಯಲ್ಲಿದ್ದರೆ, ಅದನ್ನು ಬದಲಾಯಿಸುವುದಕ್ಕೆ ತಮ್ಮ ಅಭಿಪ್ರಾಯವೇನು?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಪುನಃ ಪುನಃ ಪರಿಶೀಲನೆ ಮಾಡಿದಂತೆಲ್ಲಾ ಅಭಿಪ್ರಾಯ ಬದಲಾವಣೆ ಮಾಡುವುದು ಕಷ್ಟ. ಏಕೆಂದರೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಎರಡಕ್ಕೆ ಎರಡು ಸೇರಿಸಿದರೆ ನಾಲ್ಕೇ ಹೊರತು ಹೆಚ್ಚಿಗೆ ಆಗುವುದಿಲ್ಲ. ಆದುದರಿಂದ ಮಾಡುವಾಗ ಸರಿಯಾಗಿ ಮಾಡಿ ಅದರಂತೆ ತೀರ್ಮಾನ ಮಾಡಿದ್ದೇವೆ.

Grant of lands to Political Sufferers in Kolar District.

*Q.—105. Sri S. MUNI RAJU (Chikkaballapur).—

Will the Government be pleased to state.—

(a) whether any representation has been received during the past three years from the political sufferers of Kolar District for grant of land;

(b) if so, when the representation was received and at what stage it is pending?

A.—Sri KADIDAL MANJAPPA (Minister for Revenue).—

(a) Yes.

(b) Representations were received between the years 1956-57 to 1958-59 and up-to-date. Pending cases are under examination.

Sri S. MUNIRAJU.—May I know the number of applications that have been received so far?

Sri KADIDAL MANJAPPA.—In the last three years 169 applications were received.

Sri S. MUNIRAJU.—May I know the number of applications that have been disposed of?

Sri KADIDAL MANJAPPA.—76 have been disposed of.

Sri S. MUNIRAJU.—May I know the difficulty in disposing of the remaining petitions?

Sri KADIDAL MANJAPPA.—Thay are at the various stages of disposal.

ಶ್ರೀ ಎಸ್. ಮುನಿರಾಜು.—76 ಅರ್ಜಿಗಳನ್ನು ವಿಲೇವಾರಿ ಮಾಡಿದ್ದೀರೆಂದು ಹೇಳುತ್ತೀರಿ, ಎಷ್ಟು ಅರ್ಜಿಗಳಿಗೆ ಸರ್ಕಾರದವರು ಅವರು ಕೇಳಿದಂಥ ಸಹಾಯವನ್ನು ಕೊಟ್ಟಿದ್ದೀರಿ?

Sri KADIDAL MANJAPPA.—I have not got those details. I will get the details and furnish them.

Sri M. C. NARASIMHAN.—Is it not a fact that the applicants to whom you have given lands, are landholders also?

Sri KADIDAL MANJAPPA.—Not at all. According to Rules, only landless persons and those that are poor have been given lands and not the landholders.

Sri G. E. HOOVER.—May I know whether those political suffers have not been benefited by their political activities?

Sri KADIDAL MANJAPPA.—I do not think that people are benefited on account of their political activities.

ಶ್ರೀ ಎಸ್. ಆರ್. ರಾಮಯ್ಯ.—ಅರ್ಜಿ ಕೊಟ್ಟಿದ್ದವರು ಗತಿಸಿಹೋಗಿದ್ದರೆ ಅವರ ಕುಟುಂಬ ವರ್ಗದವರಿಗೆ ಏನಾದರೂ ಪರಿಹಾರ ಕೊಡುತ್ತೀರಾ?

ಶ್ರೀ ಕೆದಿದಾಳ್ ಮಂಜಪ್ಪ.—ಕೊಡಬೇಕು ಎಂದು ರೂಲ್ಸ್ ಇವೆ.

Sri C. M. ARUMUGHAM.—In view of the large number of applications received from political sufferers, will the Government constitute a Board to look into their sufferings and also to look into the measures that should be adopted to relieve them from their sufferings?

Sri KADIDAL MANJAPPA.—There is no need for constituting such a Board.